ದಿನಾಂಕಃ 27.03.2023 ರಂದು ಡಿ.ಡಬ್ಲೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಶ್ರೀ ಕೆಟಿ ವಕೀಲರಿಂದಃ</u>

ನನ್ನ ತಾತ ವೆಂಕಟರೆಡ್ಡಿ ಎಂದರೆ ಸರಿ. ಸದರಿ ವೆಂಕಟರೆಡ್ಡಿರವರ ವಾರಸುದಾರರಾಗಿರುವ ನಾವು ಒಟ್ಟು ಕುಟುಂಬದಲ್ಲಿದ್ದೇವೆ ಎಂದರೆ ಸರಿಯಲ್ಲ. ನಾವು ವಿಭಾಗವಾಗಿದ್ದೇವೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ಸದರಿ ವಿಭಾಗದಲ್ಲಿ ಯಾರಿಗೆ ಯಾವ ಆಸ್ತಿ ಸೇರಿದೆ ಎಂದರೆ ಹೇಳಲಾಗುವುದಿಲ್ಲ. ದಾವಾ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ನನ್ನ ತಾತನ ಹೆಸರಿನಲ್ಲಿದೆ. ಐಟಂ ನಂಬರ್ 2 , 4 , 6 ಮತ್ತು 8 ಆಸ್ತಿಗಳು 11 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ನಮ್ಮ ಕುಟುಂಬದವರು ಈ ಹಿಂದೆ ಕಬ್ಬು, ನೆಲಗಡಲೆ ಬೆಳೆಯುತ್ತಿದ್ದೆವು ಎಂದರೆ ಸರಿ ನಮ್ಮ ಕುಟುಂಬದ ಆಸ್ತಿಯ ಆದಾಯದಿಂದ ಐಟಂ ನಂಬರ್ 2 , 4 , 6 ಮತ್ತು 8 ಅನ್ನು 11 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ದಾವಾ ಸ್ವತ್ತಿನ ಆದಾಯವನ್ನು ಒಟ್ಟಾಗಿ ಅನುಭವಿಸುತ್ತಿದ್ದೆವು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಹೆಣ್ಣು ಮಕ್ಕಳ ನಡುವೆ ಹೊಂದಾಣಿಕೆ ಇಲ್ಲದ ಕಾರಣ ಅವರು ಬೇರೆ ಇರುತ್ತಾರೆ ,ಆದರೆ ದಾವಾ ಸ್ವತ್ತನ್ನು ಒಟ್ಟಿಗೆ ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಲು ಸದರಿ ಸ್ವತ್ತುಗಳು 11 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು.